ನೀಡಿಕೆಯ ಸಲುವಾಗಿ ನೀಡಲಾದ ಮಾರ್ಗದ ಸೂಚನೆಗಳಂತೆ ಶಾಸಕರ ಸಲಹೆ ಪಡೆದು ಅಭಿವೃದ್ಧಿ ಸಮಿತಿಗಳು ರಚಿತವಾಗಿದ್ದರೂ, ಕಾರ್ಯರೂಪಕ್ಕೆ ಬಂದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಮಿತಿಗಳಿಗೆ ಇನ್ನೂ ವಿದ್ಯಾ ಇಲಾಖಾ ಉಪ ನಿರ್ದೇಶಕರ ಒಪ್ಪಿಗೆ ದೊರೆತಿಲ್ಲವೆಂದು ಕೆಲವು ಶಿಕ್ಷಣ ಸಂಸ್ಥೆಗಳಿಂದ ತಿಳಿದು ಬಂದಿದೆ. ತಮ್ಮ ಅಧ್ಯಕ್ಷತೆಯಲ್ಲಿ ಸಮಿತಿ ನೇಮಿಸಲು ಶಾಸಕರಾರು ಕೇಳಿಕೊಂಡಿಲ್ಲ. ಆದರೆದ ಸರಕಾರವು ಶಾಸಕರ ಮಾರ್ಗದರ್ಶನದಲ್ಲಿ ಸಮಿತಿಗಳು ಕಾರ್ಯನಿರ್ವಹಿಸಬೇಕೆಂದು ತೀರ್ಮಾನಿಸಿ ಆದೇಶ. ನೀಡಿದ್ದರೂ, ಸಾಂಪ್ರದಾಯವಾಗಿ ನೀಡಬೇಕಾದ ಮಂಜೂರಾತಿಗೆ ಸರಕಾರದ ವಿದ್ಯಾ ಇಲಾಖಾಧಿಕಾರಿಗಳೇ ಮೊನಮೇಷ ಮಾಡುತ್ತಿರುವುದು ನಿಧಾನದ್ರೋಹದ ಕಾರ್ಯವೈಖರಿಗೆ ಸ್ಪಷ್ಟ ಉದಾಹರಣೆಯಾಗಿದೆ ಮತ್ತು ಶಾಸಕ ಸಮುದಾಯದ ಮೇಲೆ ಮಾಡುತ್ತಿರುವ ಅಪ್ರತ್ಯಕ್ಷ ಅಪಮಾನವೂ ಆಗಿದೆ ಸರಕಾರಕ್ಕೆ ತನ್ನ ಅಂಗೀಕೃತ ನೀತಿಯಲ್ಲಿ ನಂಬಿಕೆ ಇದ್ದರೆ, ಕೂಡಲೇ ಮಂಜೂರಾತಿ ನೀಡಿ, ಸಮಿತಿಗಳು ಕಾರ್ಯ ಪ್ರವೃತ್ತವಾಗುವಂತೆ ನೋಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರ ಗಮನಕ್ಕೆ ಈ ವಿಷಯವನ್ನು ತರುತ್ತೇನೆ.

೧೧. ಚಿಂಚೋಳಿ ತಾಲ್ಲೂಕಿನ ರಟಕಲ ಗ್ರಾಮದಲ್ಲಿ ಹೊಸಕಟ್ಟಡ ಕಟ್ಟಿದ್ದರೂ ಹಳೆ ಕಟ್ಟಡದಲ್ಲಿ ಸರ್ಕಾರಿ ಪ್ರೌಢಶಾಲೆಯನ್ನು ನಡೆಸುತ್ತಿರುವ ಬಗ್ಗೆ

ಶ್ರೀ ಎಂ. ವೀರಯ್ಯಸ್ವಾಮಿ.— ಮಾನ್ಯ ಅಧ್ಯಕ್ಷರೇ, ಚಿಂಚೋಳಿ ತಾಲ್ಲೂಕಿನ ರಟಕಲ ಗ್ರಾಮದಲ್ಲಿ ಸರಕಾರಿ ಪ್ರೌಢಶಾಲೆ ಕಟ್ಟಿಡ ಕೆಲಸ ಕಳೆದ ೩ ವರ್ಷಗಳ ಹಿಂದೆಯೇ ಪೂರ್ತಿಯಾಗಿ ಮುಗಿದಿದ್ದು, ಕೇವಲ ಕಂಟ್ರಾಕ್ಟುದಾರರು ಹಾಗೂ ಕಾಮಗಾರಿ ಇಲಾಖೆಯ ಅಧಿಕಾರಿಗಳ ಬೇಜವಾಬ್ದಾರಿ ವರ್ತನೆಯಿಂದಾಗಿ ಸರಕಾರದ ವಶಕ್ಕೆ ತೆಗೆದುಕೊಳ್ಳದೆ ಸ್ಥಳಾವಕಾಶವಿಲ್ಲದ ಹಳೆಯ ಕಟ್ಟಡದಲ್ಲಿ ಶಾಲೆ ನಡೆಸುತ್ತಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಕಾಮಗಾರಿ ಇಲಾಖೆಯ ಅಧಿಕಾರಿಗಳಿಗೆ ಅನೇಕ ಸಲ ಕೇಳಲಾಗಿ ಯಾವುದೇ ತೃಪ್ತಿಕರ ಉತ್ತರ ಬಂದಿಲ್ಲ. ಈ ಬಗ್ಗೆ ಸರಕಾರ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟು ಶಾಲೆ ಕಟ್ಟಡ ಸುಸಜ್ಜಿತ ರೀತಿಯಲ್ಲಿ ಶಿಕ್ಷಣ ಇಲಾಖೆಗೆ ವರ್ಗಾಯಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರ ಗಮನಕ್ಕೆ ಈ ವಿಷಯವನ್ನು ತಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಿಳಿಸುತ್ತೇನೆ.

೧೨. ಉಡುಪಿ ತಾಲ್ಲೂಕಿಗೆ ಸ್ವರ್ಣ ನೀರು ಸರಬರಾಜು ಎರಡನೇ ಹಂತಕ್ಕೆ ಮಂಜೂರಾತಿ ನೀಡುವುದು

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).— ಪ್ರತಿವರ್ಷ ಮಾರ್ಚ್ ಮಧ್ಯ ಭಾಗದಿಂದ ಮುಂಗಾರು ಪ್ರಾರಂಭವಾಗುವವರೆಗೆ ಉಡುಪಿಯ ಪುರಸಭೆಯ ಸರಹದ್ದಿನಲ್ಲಿ ಹಾಗೂ ಇತರ ಕೆಲವು ಗ್ರಾಮಗಳ ಜನರು ನೀರಿನ ಕೊರತೆಯನ್ನೆದುರಿಸುವ ದೃಷ್ಟಿಯಿಂದ ಸ್ವರ್ಣ ನೀರು ಸರಬರಾಜು ಯೋಜನೆಯ ಎರಡನೇ ಹಂತಕ್ಕೆ ಮಂಜೂರಾತಿ ನೀಡಬೇಕೆಂದು ಸರಕಾರವನ್ನು ಈಗಾಗಲೇ ಒತ್ತಾಯಿಸಲಾಗಿದ್ದು, ಪುರಸಭೆಯವರಿಗೆ ಇದಕ್ಕೆ ವೆಚ್ಚವಾಗುವ ಹಣವನ್ನು ಹಿಂದಿರುಗಿಸುವ ಸಾಮರ್ಥ್ಯವಿಲ್ಲ ಎಂಬ ಕಾರಣವೊಡ್ಡಿ, ಸರಕಾರದವರು ಈ ಯೋಜನೆಗೆ ಮಂಜೂರಾತಿ ನೀಡಿರುವುದಿಲ್ಲ. ಸುಮಾರು ೨೦ ಹೆಚ್ಚಿನ ಗ್ರಾಮಗಳಿಗೆ ಈ ಯೋಜನೆಯಿಂದ ಅನುಕೂಲವಾಗಲಿದ್ದು ವೆಚ್ಚದ ಶೇ.೫೦ರಷ್ಟನ್ನು ಕೇಂದ್ರಸರಕಾರ ಭರಿಸಲಿರುವುದರಿಂದ ಉಡುಪಿ ಪುರಸಭೆ ಎಲ್ಲೆಯಲ್ಲಿ ಬರುವ ಜನರಿಗೆ ಮಾತ್ರವಲ್ಲದೆ ಇತರೇ ಅನೇಕ ಗ್ರಾಮಂಗಳ ಜನರಿಗೂ ಈ ಯೋಜನೆಯನ್ನು ಪುನರ್‌ಪರಿಶೀಲಿಸ ಬೇಕೆಂದೂ, ಈ ವರ್ಷ ಹಿಂದಿಗಿಂತ ನೀರಿನ ಬವಣೆ ಹೆಚ್ಚಿರುವುದರಿಂದಲೂ, ಮೇಲ್ಕಂಡ ಯೋಜನೆಯನ್ನು ಪುನರ್ ಪರಿಶೀಲಿಸಬೇಕೆಂದೂ, ಹಾಗೂ ಕೂಡಲೇ ಅನುಮತಿ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.